ನೋವಿಲ್ಲದ ಕ್ಷಣಗಳಿಗೆ ಕಾಯುತ್ತಾ ಕೂರುವಷ್ಟು ಬದುಕು ದೀರ್ಘವಿಲ್ಲ. 'ನೋವಿನೊಡನೆಯ ಹೋರಾಟದಲ್ಲಿ ಬದುಕನ್ನು ಮರೆಯಬೇಕಿಲ್ಲ' ಎಂದು ಕಲಿಸಿದವರು ದೀಪಾ ಮಲ್ಲಿಕ್.

ದೀಪಾ ಮಲ್ಲಿಕ್ ಅವರನ್ನು ಭೇಟಿಯಾದಾಗ ಅವರ ಮುಖದ ತುಂಬಾ ಕಂಡದ್ದು, ಹೊಂಬಿಸಿಲ ಹೂನಗು. ಅವರ ಕಾಲುಗಳತ್ತ ನನ್ನ ಗಮನವೇ ಹೋಗಿರಲಿಲ್ಲ. ಅವರ ಮಗುವಿಗೆ ಆದ ಅಪಘಾತ ನನಗೆ ತಿಳಿದಿತ್ತು, ಆದರೆ ನಂತರ ಏನಾಯಿತು ಗೊತ್ತಿರಲಿಲ್ಲ. 'ನಿಮ್ಮ ಮಗಳು ದೇವಿಕಾ ಈಗ ಹೇಗಿದ್ದಾರೆ?' ನಾನು ವಿಚಾರಿಸಿದೆ. 'ಇಲ್ಲೇ ಇದ್ದಾಳೆ, ನೀವೇ ನೋಡಿ' ಎಂದರು. ಅವರ ಹಿಂದೆ ಆತ್ಮವಿಶ್ವಾಸದಿಂದ ನಿಂತಿದ್ದರು ದೇವಿಕಾ ಮಲ್ಲಿಕ್.

## ಸೇನೆಯ ಕೂಸು

ದೀಪಾ 1970ರ ಸೆ. 30ರಂದು ಹರಿಯಾಣಾದಲ್ಲಿ ಹುಟ್ಟಿದರು. ತಾಯಿ ವೀಣಾ ನಾಗ್‌ಪಾಲ್. ತಂದೆ ಭೂಸೇನೆಯಲ್ಲಿ ದುಡಿದಿದ್ದ ಕರ್ನಲ್ ಬಾಲ್‌ಕ್ರಿಶನ್ ನಾಗ್‌ಪಾಲ್. ಅಣ್ಣ ವಿಕ್ರಂ ನಾಗ್‌ಪಾಲ್ ಮುಂದೆ ಭೂಸೇನೆಯನ್ನು ಸೇರಲಿದ್ದ. ಸೇನೆಯ ಕೂಸಾಗಿ ಹುಟ್ಟಿದ್ದರು ದೀಪಾ.

ಬಾಲ್ಯದಿಂದಲೂ ದೀಪಾಗೆ ಕ್ರೀಡೆಗಳಲ್ಲಿ ಅಪಾರ ಆಸ್ಥೆ. ಆದರೆ ಬೈಕ್ ಓಡಿಸುವುದು ಅತಿ ಪ್ರಿಯವಾಗಿತ್ತು. ಇದೇ ಬೈಕಿನ ಹುಚ್ಚು ದೀಪಾ ಮತ್ತು ಬಿಕ್ರಮ್ ಅವರನ್ನು ಹತ್ತಿರಕ್ಕೆ ತಂದಿತ್ತು. ಕಾಲೇಜಿನ ರಜಾ ದಿನಗಳಲ್ಲಿ ಮನೆಗೆ ಬಂದಿದ್ದ ದೀಪಾ, ಬಿಕ್ರಮ್ ಅವರನ್ನು ಭೇಟಿಯಾಗಿದ್ದರು. ಬೈಕ್ ಎಂದರೆ ಆತನಿಗೂ ಪ್ರೀತಿ. ದೀಪಾಗೆ ಬಿಕ್ರಮ್ ಅವರ ಬೈಕ್ ಓಡಿಸುವಾಸೆ. 'ನನಗೆ ಬೈಕ್ ಕೊಟ್ಟವನನ್ನೇ ನಾನು ಮದುವೆಯಾಗುವುದು' ಎಂದು ದೀಪಾ ಹೇಳಿದ್ದರು. 'ನಾಳೆ ನನ್ನ ಬೈಕ್ ಕೊಡುತ್ತೇನೆ, ನನ್ನನ್ನು ವಿವಾಹವಾಗು' ಎಂದು ಬಿಕ್ರಮ್ ಕೇಳಿದ್ದರು. 'ಓಕೆ' ಎಂದೇ ಬಿಟ್ಟ ಹುಡುಗಿ, ಮರುದಿನ ಕಾವಸಾಕಿ ಬಜಾಜ್ ಬೈಕ್ ಓಡಿಸಿದ್ದರು! ಭೂಸೇನೆಯಲ್ಲಿದ್ದ ಮೇಜರ್ ಬಿಕ್ರಮ್, ದೀಪಾ ಅವರ ತಂದೆಯನ್ನು ಭೇಟಿ ಮಾಡಿದ್ದರು. ದೀಪಾ ಮತ್ತು ಬಿಕ್ರಮ್ ಅವರ ವಿವಾಹ 1989ರಲ್ಲಿ ನೆರವೇರಿತು.

ಮರು ವರ್ಷ ಮೊದಲ ಮಗು ದೇವಿಕಾ ಜನಿಸಿದ್ದಳು. ಸಂತಸದ ಕೊಡ ತುಂಬಿತ್ತು. ಬದುಕು ಪರಿಪೂರ್ಣವಾಗಿ ಕಂಡ ಕ್ಷಣವದು. ದೇವಿಕ ಅಂಬೆಗಾಲಿಟ್ಟು, ಶೀಘ್ರವೇ ನಡೆಯಲು ತೊಡಗಿದಳು. ಅವಳು ನಡೆಯುವುದಕ್ಕಿಂತ ಮೊದಲು ಓಡುವುದನ್ನೇ ಕಲಿತಂತಿತ್ತು, ಅಷ್ಟು ಚುರುಕಿನ ಮಗು. ಒಂದು ದಿನ ಅಂಗಳದಲ್ಲಿ ಮಗು ಆಡುತ್ತಿತ್ತು. ಮನೆಯ ಮೇನ್ ಗೇಟ್ ತೆರೆದಿತ್ತು. ಯಾವ ಮಾಯದಲ್ಲಿಯೋ ಮಗು ಕಣ್ಣು ಮಿಟುಕಿಸುವ ಮೊದಲೇ ನೇರ ರಸ್ತೆಗೇ ಓಡಿಬಿಟ್ಟಿತ್ತು! ಅತ್ತಲಿಂದ ವೇಗವಾಗಿ ಬರುತ್ತಿದ್ದ ಒಂದು ಬೈಕ್ ಮಗುವನ್ನು ಗುದ್ದಿತು. ಆಗ ದೇವಿಕಾ ಕೇವಲ ಒಂದೆರಡು ವರ್ಷಗಳ ಕೂಸು. ತಲೆಯ ಬಲಭಾಗಕ್ಕೆ ಬಲವಾಗಿ ಪೆಟ್ಟು ಬಿದ್ದಿತ್ತು. ತಕ್ಷಣ ಮಗುವನ್ನು ಪೂನಾ ಕಮಾಂಡ್ ಆಸ್ಪತ್ರೆಗೆ ಕರೆದೊಯ್ದರು. ಮಗುವಿನ ಎಡಭಾಗ ಪಾರ್ಶ್ವವಾಯು ಬಡಿದು ಪ್ಯಾರಲೈಸ್ ಆಗಿತ್ತು. ಅದನ್ನು 'ಹೆಮಿಪ್ಲೇಜಿಯಾ' ಎಂದು ಕರೆಯುತ್ತಾರೆ. ದೀಪಾ ಮತ್ತು ಬಿಕ್ರಮ್ ದುಃಖದ ಮಡುವಲ್ಲಿ ಮುಳುಗಿದರು.

ಅವರು ಹೊತ್ತ ಹೊರೆಯ ಅರಿವಿರದೆ ನಕಾರಾತ್ಮಕವಾಗಿ ಟೀಕೆ ಟಿಪ್ಪಣಿ ಮಾಡುವ ಕರುಣೆ ಇಲ್ಲದ ಸಮಾಜವಿತ್ತು. ನಮ್ಮ ಸಮಾಜದಲ್ಲಿ 'ಅಂಗವಿಕಲತೆಯನ್ನು ಪೂರ್ವ ಜನ್ಮದ ಪಾಪ, ಈ ಜನ್ಮದಲ್ಲಿ ಶಾಪ' ಎಂದೆಲ್ಲ ಕಾಣುವ ಅಪ್ಪಟ ಪೂರ್ವಗ್ರಹ ಅವರನ್ನು ಮತ್ತಷ್ಟು ನೋಯಿಸಿತ್ತು. ಎಲ್ಲರ ಬಗ್ಗೆ, ಆ ದೇವರ ಬಗ್ಗೆಯೂ ಎಲ್ಲಿಲ್ಲದ ಸಿಟ್ಟು ಬಂದ ಸಮಯವದು. ಎದುರು ನಿಂತ ಸಮಸ್ಯೆಯನ್ನು ನಕಾರಾತ್ಮಕವಾಗಿ ತೆಗೆದುಕೊಂಡು ಗೋಳಿಡಬಹುದು. ಬದಲಿಗೆ 'ಇದು ಬದುಕು ತನಗೆ ಒಡ್ಡಿದ ಸವಾಲು' ಎಂದು ಬಗೆದು ವೀರೋಚಿತ ಹೋರಾಟಕ್ಕೆ ಸಿದ್ಧವಾಗಬಹುದಿತ್ತು. ದೀಪಾ ಮಗುವಿನ ಹಣೆಯ ಮೇಲೆ ವಿಧಿ ಬರೆದ ಬರಹವನ್ನು ಅಳಿಸಿ, ತನ್ನ ಭವಿಷ್ಯವನ್ನು ತಾನೇ ಬರೆದುಕೊಳ್ಳುವಷ್ಟು ದೇವಿಕಾಳನ್ನು ಸಕ್ಷಮವಾಗಿಸಲು ಹಟ ತೊಟ್ಟರು.

ಈಗ ದೀಪಾರ ಎದುರು ನೂರು ಪ್ರಶ್ನೆಗಳಿದ್ದವು. ಮಗು ನಾರ್ಮಲ್ ಆಗಿ ಬೆಳೆಯಬಲ್ಲದೆ? ಮಗುವಿನ ಬುದ್ಧಿಮತ್ತೆ ಸರಿ ಇರುವುದೆ? ಮಗುವಿಗೆ ಮಾತಾನಾಡುವಲ್ಲಿ ತೊಂದರೆ ಆಗುವುದೆ? ಮಗುವಿನ ಸ್ಥಿತಿ ಸಮಯ ಸಾಗಿದಂತೆ ಮತ್ತಷ್ಟು ಹದಗೆಡುವುದೆ? ಪ್ರಶ್ನೆಗಳಿಗೆ ವೈದ್ಯರಲ್ಲೂ ಉತ್ತರವಿರಲಿಲ್ಲ. ಪುಟ್ಟ ದೇವಿಕಾ ಬೆಳೆಯುತ್ತಿದ್ದ ಆ ಸಮಯ, ಇಡೀ ಕುಟುಂಬಕ್ಕೆ ಬಲು ಕಷ್ಟದ ಕಾಲವಾಗಿತ್ತು. 'ವೇಟ್ ಅಂಡ್ ವಾಚ್', ಎಲ್ಲವನ್ನೂ ಕಾಯ್ದು ನೋಡಬೇಕಾದ ಪರಿಸ್ಥಿತಿ. ಅವರೆದುರು ಉದಾಹರಣೆಗಳಿಲ್ಲದಾಗ, ಅವರೊಂದು ಉದಾಹರಣೆಯಾಗಲು ಬಯಸಿದರು.

ಮಗುವನ್ನು ಫಿಸಿಯೋಥೆರಪಿಸ್ಟ್ ಬಳಿಗೆ ಚಿಕಿತ್ಸೆಗೆ ನಿಯಮಿತವಾಗಿ ಕರೆದೊಯ್ಯುವರು. ಮಕ್ಕಳ ಮನೋವೈದ್ಯರ ಬಳಿಗೆ ಮಗುವಿನ ಐಕ್ಯೂ ಪರೀಕ್ಷಿಸಲು ಮತ್ತೆ ಮತ್ತೆ ಹೋಗುವರು. ಮಗು ಚೇತರಿಸಿಕೊಳ್ಳಲು 'ಆಕ್ಯುಪೇಷನಲ್ ಥೆರಪಿ' ಸಹಾಯವಾಗಬಲ್ಲದು ಎಂದು ಅದನ್ನೂ ಕೊಡಿಸತೊಡಗಿದ್ದರು. ಮಗುವಿನ ಸಮಗ್ರ ಬೆಳವಣಿಗೆಯತ್ತ, ಸರ್ವಾಂಗ ವಿಕಾಸದತ್ತ ದೀಪಾ ಗಮನ ಕೊಟ್ಟರು. ಎಳೆಯ ವಯಸ್ಸಿಗೇ ಮಗುವಿಗೆ ಕ್ರೀಡೆಗಳನ್ನು ಪರಿಚಯಿಸಿದರು. ಹೊರಾಂಗಣದ ಚಟುವಟಿಕೆಗಳಿಗೆ ತೊಡಗಿಸಿದರು. ಕ್ರೀಡೆ ಎಂದರೆ 'ಇತರರೊಡನೆ ಸ್ಪರ್ಧಿಸಿ ಗೆಲ್ಲುವುದೇ ಗುರಿಯಲ್ಲ' ಎಂದು ಮೊದಲಿಗೆ ಕಲಿಸಿದರು. 'ಕ್ರೀಡೆಗಳು ನಮ್ಮಲ್ಲಿ ಆತ್ಮವಿಶ್ವಾಸ ಮತ್ತು ಆತ್ಮಾಭಿಮಾನವನ್ನು ಮೂಡಿಸುವ ಪ್ರಬಲ ಸಾಧನಗಳು' ಎಂದು ತಿಳಿಸಿದರು. ದಿಟವಾದ ಕ್ರೀಡಾ ಮನೋಭಾವವನ್ನು ಬೆಳೆಸಿದರು. ಬದುಕನ್ನು ಎದುರಿಸುವ ಕ್ಷಮತೆಯನ್ನು ನೀಡುವುದೇ ಕ್ರೀಡೆಯ ನಿಜವಾದ ಉದ್ದೇಶ ಎಂದು ಕಲಿಸಿದರು. ಇವೆಲ್ಲವೂ ಮಗುವಿನ ದೇಹದಲ್ಲಿ ಬಲವನ್ನು ಕೂಡಿಸಿದ್ದಲ್ಲದೆ, ಮಗುವಿನ ಮನೋಬಲವನ್ನು ಗಟ್ಟಿಯಾಗಿಸಿತ್ತು.

ದೇವಿಕಾ ಬೆಳೆದಂತೆ ಚೇತರಿಸಿಕೊಂಡಳು. 'ಹೆಮಿಪ್ಲೇಜಿಯಾ'ದ ಶಾಶ್ವತ ಪರಿಣಾಮಗಳಿದ್ದವು; ಎಡಭಾಗದಲ್ಲಿ ಸ್ಪಾಸ್ಟಿಸಿಟಿ (ಅಂದರೆ ಸೆಟೆದು ನೋಯುವ ಮಾಂಸಖಂಡಗಳು) ಮತ್ತು ನಿಶಕ್ತಿ. ಶಾಲೆಗೆ ಹೋಗುವ ಪುಟ್ಟ ದೇವಿಕಾಗೂ ಬದುಕು ಸವಾಲಿನದಾಗಿತ್ತು. ತಾನು ಕುಂಟುತ್ತಿರುವೆ, ಇತರ ಮಕ್ಕಳ ಹಾಗೆ ನಡೆಯುತ್ತಿಲ್ಲ. ಎಡಭಾಗದ ಮೇಲೆ ಸಮತೋಲನ ಕಾಯ್ದುಕೊಳ್ಳುವುದು ಕಷ್ಟ ಎಂದು ತಿಳಿದಿತ್ತು. ಜೊತೆಯ ಮಕ್ಕಳು ಅವಳ ನಡಿಗೆಯನ್ನು ಅಣಕಿಸಿ ನಗುವರು. ಆರು ವರ್ಷವಿದ್ದಾಗ ಒಮ್ಮೆ ಪುಟ್ಟ ದೇವಿಕಾ 'ಎಲ್ಲರೂ ನನ್ನನ್ನು ನೋಡಿ ಗೇಲಿ ಮಾಡುತ್ತಾರೆ' ಎಂದು ಅಮ್ಮನ ಮಡಿಲಲ್ಲಿ ಮುಖವಿಟ್ಟು ಅತ್ತಿದ್ದಳು. ತಾಯಿ ಮಗುವನ್ನು ಸಮಾಧಾನ ಮಾಡಿ, 'ಮಗೂ

